**ದಿನಾಂಕ:01.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

2. ನಮ್ಮ ಮನೆ ಮತ್ತು ಪಿರ್ಯಾದಿಯ ಮನೆ ನಮ್ಮೂರಿನಲ್ಲಿ ಅಕ್ಕ-ಪಕ್ಕದಲ್ಲಿರುತ್ತವೆ ಎಂದರೆ ನಿಜ. ಈ ದಿನ ನನ್ನನ್ನು ನಮ್ಮೂರಿನಿಂದ ನ್ಯಾಯಾಲಯಕ್ಕೆ ಈ ಪ್ರಕರಣದ ಪಿರ್ಯಾದಿಯು ಕರೆದುಕೊಂಡು ಬಂದಿರುತ್ತಾರೆ ಎಂದರೆ ನಿಜ. ಪೊಲೀಸರು ಶವ ಪಂಚನಾಮೆಗೆ ಬನ್ನಿ ಎಂದು ನನಗೆ ಪೊಲೀಸ್ ನೋಟೀಸನ್ನು ಕೊಟ್ಟಿರುವುದಿಲ್ಲ ಎಂದರೆ ನಿಜ. ನಿಪಿ-12 ರ ಶವ ಪಂಚನಾಮೆಗೆ ನನ್ನ ಜೊತೆ ಬೇರೆ ಯಾರು-ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ನಿಪಿ-12 ರ ಶವ ಪಂಚನಾಮೆಯಲ್ಲಿ ಏನೇನು ಬರೆದುಕೊಂಡಿದ್ದಾರೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ನಿಜ. ನಿಪಿ-12 ರ ಶವ ಪಂಚನಾಮೆಯನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ನಿಜ.

3. ನಿಪಿ-13 ಮತ್ತು 14 ರ ಪೋಟೋಗಳನ್ನು ಪೊಲೀಸರು ಏಕೆ ತೆಗೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪ್ರಕರಣದ ಬಗ್ಗೆ ಮತ್ತು ಶವ ಪಂಚನಾಮೆಯ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಪೊಲೀಸರು ನಮ್ಮೂರಿಗೆ ಬಂದಿದ್ದಾಗ ನಿಪಿ-12 ರ ಶವ ಪಂಚನಾಮೆಗೆ ಸಹಿ ಪಡೆದುಕೊಂಡಿದ್ದಾರೆಂದರೆ ನಿಜ. ನಾನು ಹರಿಹರಕ್ಕೆ ಹೋಗಿಲ್ಲ ಮತ್ತು ಯಾವುದೇ ಶವ ಪಂಚನಾಮೆಗೆ ಭಾಗವಹಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.